1	2	3	4	5
33.	6-4-1972	45.12	30.88	84.24
34.	7-5-1972	20.00	11.80	8.20
35.	21-5-1972	16.87	9.74	6.13
36.	11-6-1972	20.30	11.78	8.22
37.	2-7-1972	15.38	9.47	5.91
38.	23-7-1272	16.82	9.91	6.91
39.	20-8-1972	25 00	15.45	9 54
40.	3-9-1972	18.75	10.94	7.81
41.	24-9-1972	18.75	12 04	6.71
42.	15-10-1972	18.25	11.05	7.20
43.	1-11-1972	40.24	2 .70	12.54
44.	10-12-1972	17 52	10.51	6.71
45.	31-12-1972	17.45	10.57	6 88
46.	14-1-1973	14.21	8.79	5 42
47.	28-1-1973	13.81	8.49	5.38
48.	11-2-1973	15.00	9.28	5.72
49.	25-2-1973	13.28	8.21	5.09
50.	11-3-1973	15.00	9.51	5.47
51.	1-4-1973	15.00	9.53	5.47
52.	13-5-1973	37.53	32.30	5.23
M/1.	27-5-1973	7.50	6.13	1.37
35.	17-6-1973	22.50	17.02	5.48
M/2.	1-7-1973	10.00	7.00	3.00
M/3.	22-7-1973	13.07	9.37	3.70
M/4.	19-8-1973	14.04	9.61	4.43
M/5.	16-9-1973	13.66	9.5'	4. 5
M/6.	7-10-1973	10.00	7 00	3.00
54.	18-11-1973	30 24	86. 5	4.09
55.	16-12-1973	15.00	12 50	2.50
56.	14-1-1974	15.00	12 50	2.50
57.	17-2-1974	15 00	1.50	2.50
57.		2037.82	1327 09	719.73

ರಾಜ್ಯ ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದು.

(೬೭) ೧೨.—ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್, (ಸಿಸಿ) —ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(೨) ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಮಟ್ಟದಲ್ಲೂ 'ಆಡಳಿತ ಭಾಷೆ' ಕನ್ನಡವಾಗಲು ರಾಜ್ಯ ಸರ್ಕಾರ ಈ ವರೆಗೂ ಮಾಡಿರುವ ಏರ್ಪಾಡುಗಳೇನು?

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—

ಮಾರ್ಚ್ ೧೨, ೧೯೬೮ನೆಯ ದಿನಾಂಕದ ಜೀವಿಡಿ ೩೧ ಒಸಿಎಂ ೬೭ನೆಯ ಸರ್ಕಾರಿ ಆದೇಶದಲ್ಲಿ ಕನ್ನಡವನ್ನು ತಾಲ್ಲೂಕು ಮಟ್ಟದಲ್ಲಿ ೧-೪-೧೯೬೮ ರಿಂದ ಆಡಳಿತ ಭಾಷೆಯಾಗಿ ಮಾಡಲಾಯಿತು. ಆ

ಸೆಪ್ಟೆಂಬರ್ ೯, ೧೯೭೦ನೆಯ ದಿನಾಂಕದ ಜಿಎಡಿ ೧೨ ಪಿಒಎಲ್ ೭೦ನೆಯ ಸರ್ಕಾರಿ ಆದೇಶದಲ್ಲಿ ಕನ್ನಡವನ್ನು ಸಬ್-ಡಿವಿಜನ್ ಮಟ್ಟದಲ್ಲಿ ೧-೧೧-೧೯೭೦ರಿಂದ ಆಡಳಿತ ಭಾಷೆಯನ್ನಾಗಿ ಮಾಡಲಾಯಿತು.

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿದ ಕಾರ್ಯಕ್ರಮಗಳ ಪ್ರಗತಿಯ ಪರಿಶೀಲನೆಗಾಗಿ ಮತ್ತು ಕನ್ನಡವನ್ನು ಉನ್ನತ ಮಟ್ಟಗಳಲ್ಲಿ ಆಡಳಿತ ಭಾಷೆಯನ್ನಾಗಿ ಮಾಡುವ ಸಲುವಾಗಿ ಆಗಸ್ಟ್ ೫, ೧೯೭೦ನೆಯ ದಿನಾಂಕ ಜಿಎಡಿ ೬ ಪಿಒಎಲ್ ೭೦ನೆಯ ಸರ್ಕಾರಿ ಆದೇಶದಲ್ಲಿ ಒಂದು ವಿಶೇಷ ಸಮಿತಿಯನ್ನು ನೇಮಕ ಮಾಡಲಾಯಿತು. ಈ ಸಮಿತಿಯು ತನ್ನ ವರದಿಯನ್ನು ಮಾರ್ಚ್ ೧೯೭೧ರಲ್ಲಿ ಸಲ್ಲಿಸಿತು. ದಿನಾಂಕ ೧೪-೮-೧೯೭೨ರಿಂದ ಕನ್ನಡವನ್ನು ಜಿಲ್ಲಾ ಮಟ್ಟದಲ್ಲಿ ಆಡಳಿತ ಭಾಷೆಯನ್ನಾಗಿ ಮಾಡಲಾಯಿತು.

ಈ ಕೆಳಕಂಡ ಕಾರ್ಯಗಳನ್ನು ಕೈಕೊಳ್ಳಲಾಯಿತು.

(೧) ಪ್ರತಿಯೊಂದು ತಾಲ್ಲೂಕಿಗೂ ಒಂದು ಬೆರಳಚ್ಚು ಯಂತ್ರವನ್ನು ಮತ್ತು ಈಗಿರುವ ಇಂಗ್ಲೀಷ್ ಬೆರಳಚ್ಚುಗಾರರು ಕನ್ನಡ ಬೆರಳಚ್ಚು ಕಲಿಯುವವರೆಗೆ ತಿಂಗಳಿಗೆ ೧೫ ರೂ. ಪ್ರಕಾರ ವಿಶೇಷ ವೇತನವನ್ನು ಮಂಜೂರು ಮಾಡಲಾಗಿದೆ.

(೨) ಸಾರ್ವಜನಿಕರಿಂದ ಬರತಕ್ಕ ಕನ್ನಡದ ಅರ್ಜಿಗಳಿಗೆ ಕನ್ನಡದಲ್ಲಿ ಉತ್ತರ ಕೊಡಬೇಕೆಂದು ಎಲ್ಲಾ ಇಲಾಖೆಗಳ ಮುಖ್ಯಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಮತ್ತು ಅವರೂ ತಮ್ಮ ಅಧೀನದಲ್ಲಿರುವ ಅಧಿಕಾರಿಗಳಿಗೆ ಅದೇ ರೀತಿ ಸೂಚನೆ ಕೊಡುವಂತೆ ತಿಳಿಸಲಾಗಿದೆ.

(೩) ಅನೇಕ ಕನ್ನಡ ಬೆರಳಚ್ಚುಗಾರರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ ಮತ್ತು ಮುಂದೆ ಜಿಲ್ಲಾ ಮಟ್ಟದಿಂದ ಕೆಳಗೆ, ಎಲ್ಲಾ ಕಚೇರಿಗಳಲ್ಲೂ ಕನ್ನಡ ಬೆರಳಚ್ಚುಗಾರರ ಹುದ್ದೆಗಳನ್ನು ಮಂಜೂರು ಮಾಡಲಾಗುವುದು. ಆದರೆ ಈ ರೀತಿ ಮಂಜೂರು ಮಾಡಬೇಕಾದರೆ, ಸಾಕಷ್ಟು ಬೆರಳಚ್ಚು ಯಂತ್ರಗಳು ದೊರೆಯಬೇಕು.

(೪) ೭೭ ಇಲಾಖೆಗಳಿಗೆ ಸಂಬಂಧಪಟ್ಟ ಪಾರಿಭಾಷಿಕ ಶಬ್ದಕೋಶಗಳು ಸಿದ್ಧವಾಗಿವೆ. ಇವುಗಳಲ್ಲಿ ೧೪ ಶಬ್ದಕೋಶಗಳು ಆಚ್ಚಾಗಿವೆ. ಕಾನೂನಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಶಬ್ದಕೋಶ ಸಿದ್ಧವಾಗುತ್ತಿದೆ.

(೫) ಕನ್ನಡ ತಿಳಿಯದ ಸರ್ಕಾರಿ ನೌಕರರಿಗಾಗಿ ಕನ್ನಡದ ತರಗತಿಗಳು ಸೆಕ್ರೆಟೇರಿಯಟ್ಟಿನಲ್ಲೂ ಮತ್ತು ಬೆಂಗಳೂರು ಡಿವಿಜನಲ್ ಕಮಿಷನರ್‌ರವರ ಕಚೇರಿಯಲ್ಲೂ ನಡೆಯುತ್ತಿವೆ. ಕನ್ನಡ ಬೆರಳಚ್ಚು ಮತ್ತು ಕನ್ನಡ ಶೀಘ್ರಲಿಪಿ ಪರೀಕ್ಷೆಗೆ ಹಾಜರಾಗುವ ದಿನವನ್ನು ಕೆಲಸದ ದಿನವೆಂದು ಪರಿಗಣಿಸಬೇಕೆಂದು ಆದೇಶ ನೀಡಲಾಗಿದೆ.

(೬) ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ರಸ್ತೆಗಳಹೆಸರುಗಳನ್ನು ಕನ್ನಡದಲ್ಲಿ ಬರೆಯುವಂತೆ ಚೀಫ್ ಇಂಜನಿಯರ್ (ಕಟ್ಟಡಗಳು ಮತ್ತು ಸಂಪರ್ಕ)ರವರಿಗೆ ಆದೇಶ ನೀಡಲಾಗಿದೆ.

(೭) ತಾ॥ ೫-೭ ೭೨ ಜಿಎಡಿ ೧೮ ಪಿಒಎಲ್ ೭೨ನೆಯ ಸರ್ಕಾರಿ ಆದೇಶದಲ್ಲಿ ವರ್ಗಾವಣೆ, ರಜಾ ಮಂಜೂರಾತಿ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಆದೇಶಗಳನ್ನು ಕನ್ನಡದಲ್ಲೇ ಹೊರಡಿಸಬೇಕೆಂದು ಸರ್ಕಾರದ ಕಾರ್ಯದರ್ಶಿಗಳಿಗೂ ಇಲಾಖಾ ಮುಖ್ಯಾಧಿಕಾರಿಗಳಿಗೂ ಆದೇಶ ನೀಡಲಾಗಿದೆ.

(೮) ಆಗಸ್ಟ್ ೩೦, ೧೯೭೨ನೆಯ ದಿನಾಂಕದ ಜಿಎಡಿ ೧೭ ಪಿಒಎಲ್ ೭೨ನೆಯ ಸರ್ಕಾರಿ ಆದೇಶದಲ್ಲಿ ಸಾರ್ವಜನಿಕ ಅನುಕೂಲತೆಗಾಗಿ ಇನ್ನು ಮುಂದೆ ಎಲ್ಲಾ ಇಲಾಖಾ ರಿಜಿಸ್ಟರುಗಳು ಫಾರ್ಮುಗಳು, ನೋಟೀಸುಗಳು, ಇತ್ಯಾದಿಗಳನ್ನು ಕನ್ನಡ-ಇಂಗ್ಲಿಷ್ ಇವೆರಡೂ ಭಾಷೆಗಳಲ್ಲಿ ಆಚ್ಚು ಮಾಡಿಸಬೇಕೆಂದು ಆದೇಶಿಸಲಾಗಿದೆ.

(೯) ೧೭-೨-೧೯೭೨ನೇ ದಿನಾಂಕದ ಜಿಎಡಿ ೬೦ ಪಿಒಎಲ್ ೭೨ನೆಯ ಸರ್ಕಾರಿ ಆದೇಶದ ಪ್ರಕಾರ, ಉನ್ನತ ಮಟ್ಟದಲ್ಲಿ ಕನ್ನಡವನ್ನು ಬಳಸುವ ಸಲುವಾಗಿ ಸಾಧ್ಯವಾದ ಮಟ್ಟಿಗೆ ಫೈಲುಗಳಲ್ಲಿ ಕನ್ನಡದಲ್ಲಿ ಬರೆಯಬೇಕೆಂದೂ ಆದೇಶ ನೀಡಲಾಗಿದೆ.

(೧೦) ಸರ್ಕಾರದ ಸುತ್ತೋಲೆ ನಂ. ಜಿಎಡಿ ೪೭ ಪಿಒಎಲ್ ೭೨ ದಿನಾಂಕ ೨೯-೬-೧೯೭೨ರ ಪ್ರಕಾರ ಸರ್ಕಾರಿ ಕಛೇರಿಯಲ್ಲಿ ಉಪಯೋಗಿಸುವ ಮೊಹರುಗಳು ಪತ್ರಗಳು ಮುಂತಾದವುಗಳು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿರಬೇಕೆಂದು ಆದೇಶ ನೀಡಲಾಗಿದೆ.

(ಶ್ರೀ ಡಿ. ದೇವರಾಜ್ ಅರಸ್)

(೧೧) ಕೊನೆಯಂದಾಗಿ, ಸುತ್ತೋಲೆಯಲ್ಲಿ ಜೆಎಡಿ ೩೧ ಪಿಒಲ್ ೭೨ ದಿನಾಂಕ ೨೬-೭-೧೯೭೨ರ ಪ್ರಕಾರ ಸರ್ಕಾರದ ಎಲ್ಲಾ ಸೂಚನೆಗಳನ್ನು ಜಾರಿಗೆ ತರಬೇಕೆಂದೂ ಪಂಚಾಯತ್ ಸಾಧ್ಯವಾದ ಕಡೆಗಳಲ್ಲಿ ಅವರ ಆಡಳಿತಗೊಳಪಟ್ಟಿರುವ ಇಲಾಖೆಗಳ ಅಧಿಕಾರಿಗಳಿಗೆ ಸೂಕ್ತ ಸೂಚನೆ ಕೊಡಬೇಕೆಂದೂ ಎಲ್ಲಾ ಇಲಾಖಾ ಮುಖ್ಯಾಧಿಕಾರಿಗಳಿಗೆ ತಿಳಿಸಲಾಗಿದೆ

ಭಾಷಾಂತರ ಇಲಾಖೆಯ ಪುನರ್ವ್ಯವಸ್ಥೆಯನ್ನು ಮಂಜೂರು ಮಾಡಲಾಗಿದೆ. ಪುನರ್ವ್ಯವಸ್ಥೆಯ ನಂತರ ಭಾಷಾಂತರ ಇಲಾಖೆಯನ್ನು ಭಾಷಾ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯ ಎಂದು ಕರೆಯಲಾಗಿದೆ.

ಸರ್ಕಾರಿ ಆದೇಶದ ನಂ. ಇಡಿ ೫೧ ಎಂಎಲ್‌ಸಿ ೭೩ ದಿನಾಂಕ ೪-೧೧-೧೯೭೩ರ ಪ್ರಕಾರ ೫,೫೯,೭೫೦ ರೂ.ಗಳನ್ನು ಕನ್ನಡದ ಅಭಿವೃದ್ಧಿ ಯೋಜನೆಗಳಿಗಾಗಿ ಈಗಾಗಲೇ ಮಂಜೂರು ಮಾಡಲಾಗಿದೆ.

(ಆ) ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ರಾಜ್ಯ ಸರ್ಕಾರ ಜಾರಿಗೆ ತರಲು ಇನ್ನೂ ತೆಗೆದುಕೊಳ್ಳಲಿರುವ ಕಾಲಮಿತಿಯು ?

(ಇ) ಈ ಯೋಜನೆಯನ್ನು ಕೂಡಲೇ ಜಾರಿಗೆ ತರಲು ಉಂಟಾಗಿರುವ ಅಡಚಣೆಗಳೇನು ?

(ಆ) ಕನ್ನಡವನ್ನು ಉನ್ನತ ಮಟ್ಟಗಳಲ್ಲಿ ಆಡಳಿತ ಭಾಷೆಯನ್ನಾಗಿ ಮಾಡಲು ಎಲ್ಲಾ ಪೂರ್ವಭಾವಿ ಸಿದ್ಧತೆಗಳನ್ನು ಮಾಡಲಾಗುತ್ತಿದೆ. ಇದುವರೆಗೆ ಕೆಳಮಟ್ಟಗಳಲ್ಲಿ ಈ ಸಂಬಂಧದಲ್ಲಿ ಸಾಧಿಸಿದ ಪ್ರಗತಿಯನ್ನು ಪರಿಶೀಲಿಸಿ ಸೂಕ್ತ ಕಾಲದಲ್ಲಿ ಕನ್ನಡವನ್ನು ರಾಜ್ಯಮಟ್ಟದಲ್ಲಿ ಆಡಳಿತ ಭಾಷೆಯನ್ನಾಗಿ ತರಲಾಗುವುದು.

(ಇ) ಕನ್ನಡ ಬೆರಳಚ್ಚು ಯಂತ್ರಗಳ ಪೂರೈಕೆಯಂ ಕಠಿಣ ಸಮಸ್ಯೆಯಾಗಿದೆ.

ಆಧಿನಿಯಮಗಳು, ನಿಯಮಾವಳಿಗಳು. ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ, ಕರ್ನಾಟಕ ಆರ್ಥಿಕ ಸಂಹಿತೆ (ಸಂಪುಟ ೧ ಮತ್ತು ೨) ಕರ್ನಾಟಕ ಖಜಾನೆ ಸಂಹಿತೆ (ಸಂಪುಟ ೧ ಮತ್ತು ೨) ಮತ್ತು ಸಾದಿಲ್ವಾರು ವೆಚ್ಚದ ಕೈಪಿಡಿ ಇವುಗಳನ್ನು ಭಾಷಾಂತರಿಸಿ, ಮುದ್ರಣ ಮಾಡಿಸಿ ಎಲ್ಲಾ ಅಧಿಕಾರಿಗಳಿಗೂ ಒದಗಿಸ ಬೇಕಾಗುತ್ತದೆ. ಈ ಕೆಲಸವನ್ನು ಕೈಕೊಳ್ಳಲಾಗಿದೆ.

ಎಲ್ಲಾ ಇಲಾಖೆಗಳ ರಿಜಿಸ್ಟರುಗಳು, ನಮೂನೆಗಳು, ನೋಟೀಸುಗಳು ಮುಂತಾದವುಗಳನ್ನು ಭಾಷಾಂತರಿಸಿ, ಎಲ್ಲಾ ಅಧಿಕಾರಿಗಳಿಗೂ ಸಾಕಾಗುವಷ್ಟು ಸಂಖ್ಯೆಯಲ್ಲಿ ಒದಗಿಸಬೇಕಾಗಿದೆ. ಆಡಳಿತ ಶಬ್ದಕೋಶವನ್ನು ಎಲ್ಲಾ ಇಲಾಖೆಗಳಿಗೆ ಕೊಡಲಾಗಿದೆ.

ಇಲಾಖಾ ಪಾರಿಭಾಷಿಕ ಶಬ್ದಕೋಶಗಳ ಕೆಲಸ ಪೂರೈಸುವುದಕ್ಕೆ ಇನ್ನು ಕೊಂಚ ಕಾಲಾವಕಾಶಬೇಕು. ಈ ಕೆಲಸವನ್ನು ತ್ವರಿತಗೊಳಿಸಲಾಗುವುದು.

ಲೆವಿ ಮೂಲಕ ಭತ್ತವನ್ನು ಖರೀದಿಸುವುದು.

(೫೨) ಶ್ರೀ ಹಿಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—

ಆಹಾರ ಹಾಗೂ ಅರಣ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಸರಕಾರ ೧೯೭೩-೭೪ನೆಯ ಸಾಲಿಗೆ ರಾಜ್ಯಾದ್ಯಂತ ಲೆವಿ ರೂಪದಲ್ಲಿ ಯಾವ ಯಾವ ಜಿಲ್ಲೆಗಳಿಂದ ಎಷ್ಟೆಷ್ಟು ಲೆವಿ ಭತ್ತವನ್ನು ಶೇಖರಿಸಬೇಕೆಂದು ನಿಗದಿ ಮಾಡಿದೆ;

(ಆ) ಈವರೆಗೆ ಶೇಖರಣೆ ಮಾಡಿದ ಲೆವಿ ಭತ್ತದ ಜಿಲ್ಲಾವಾರು ವಿವರಣೆಗಳೇನು ;

(ಇ) ಈ ಲೆವಿ ರೂಪದಲ್ಲಿ ಶೇಖರಿಸಿದ ಭತ್ತವನ್ನು ಮುಕ್ತ ಮಾರುಕಟ್ಟೆ (ಓಪನ್ ಮಾರ್ಕೆಟ್) ದರದಲ್ಲಿ ರೈತನಿಗೆ ಕೊಟ್ಟಿದ್ದರೆ ತಗಲುತ್ತಿದ್ದಂಥ ಹೆಚ್ಚು ಹಣವೆಷ್ಟು ;

(ಈ) ಲೆವಿ ಭತ್ತದ ದರವನ್ನು ಹಾಲಿ ಇರುವ ದರ ಕ್ವಿಂಟಾಲಿಗೆ ರೂ. ೮೬ ರಿಂದ ರೂ. ೧೦೦ಕ್ಕೆ ಏರಿಸಲು ರೈತರು ಮಾಡಿದ ಮನವಿಯನ್ನು ಸರ್ಕಾರ ಪರಿಶೀಲಿಸಿತೆ ? ಹಾಗಾದರೆ ಫಲಿತಾಂಶವೇನು

ಶ್ರೀ ಕೆ. ಎಚ್. ಪಾಟೀಲ್ (ಆಹಾರ ಹಾಗೂ ಅರಣ್ಯ ಮಂತ್ರಿಗಳು).—